■ ವಿಶಾಖ ಎನ್.

# ಕಮಲ ಗಾರುಡಿಯಲ್ಲಿ ಮಲಯಾಳಂ ಪ್ರತಿಭೆ



ಒಂದೆಡೆ 'ಬಾಯ್ಕಾಟ್ ಬಾಲಿವುಡ್' ಅಭಿಯಾನ ಸಾಮಾಜಿಕ ಜಾಲತಾಣಗಳಲ್ಲಿ ಕಾವು ಪಡೆದುಕೊಂಡಿದೆ. ಇನ್ನೊಂದು ಕಡೆ, ದಕ್ಷಿಣ ಭಾರತದ ಸಿನಿಮಾ ರಂಗಗಳಲ್ಲಿ ಏನೇನೋ ಪ್ರಯೋಗಗಳು ಮಡುಗಟ್ಟುತ್ತಿವೆ. ಸಿನಿಮಾ ವಿಷಯದಲ್ಲಿ ಸೋತು ಸುಣ್ಣವಾಗಿದ್ದ ಕಮಲ ಹಾಸನ್ ಅವರಿಗೆ 'ವಿಕ್ರಮ್' ಗೆಲುವು ಜೀವಾನಿಲ ನೀಡಿದೆ. ಅದರ ಫಲವಾಗಿ ಅವರು ಮಲಯಾಳಂ ಚಿತ್ರರಂಗದಲ್ಲಿ ಸಂಚಲನ ಮೂಡಿಸುತ್ತಿರುವ ನಿರ್ದೇಶಕ ಮಹೇಶ್ ನಾರಾಯಣನ್ ಅವರನ್ನು ಕೆಲಸ ಮಾಡಲು ಒಪ್ಪಿಸಿದ್ದಾರೆ.



'ಟೇಕಾಫ್', 'ಸೀ ಯೂ ಸೂನ್', 'ಮಾಲಿಕ್', 'ಮಲಯಕುಂಜು' ಮಲೆಯಾಳಂ ಸಿನಿಮಾಗಳ ಮೂಲಕ ಮಹೇಶ್ ನಿರ್ದೇಶಕನಾಗಿ ಎಷ್ಟು ಪ್ರಯೋಗಮುಖಿ ಹಾಗೂ ವೈವಿಧ್ಯಕ್ಕೆ ತೆರೆದುಕೊಂಡವರು ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಫಹಾದ್ ಫಾಸಿಲ್ ನಟನಾಗಿ ಜಗಿತ ಕಾಣುವುದರಲ್ಲಿಯೂ ಅವರ ಕಾಣ್ಕೆ ಇದೆ. ಇವನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿರುವ ಕಮಲ ಹಾಸನ್, ಈ ನಿರ್ದೇಶಕನ ಚಿತ್ರದಲ್ಲಿ ನಟಿಸಲು ತಾವಾಗಿಯೇ ಮುಂದೆ ಬಂದಿದ್ದಾರೆ. ಅಷ್ಟೇ ಅಲ್ಲದೆ ಆ ಚಿತ್ರವನ್ನು ನಿರ್ಮಿಸಲು ಕೂಡ ಒಪ್ಪಿದ್ದಾರೆ.

ಮಹೇಶ್ ನಾರಾಯಣನ್ ಹಾಗೂ ಕಮಲ ಹಾಸನ್ ಇತ್ತೀಚೆಗೆ ಅಮೆರಿಕದ ಕೆಲವೆಡೆ ಒಟ್ಟಿಗೆ ಓಡಾಡಿದರು. ಅದು ಮುಂದಿನ ಅವರಿಬ್ಬರ ಸಿನಿಮಾದ ಪೂರ್ವತಯಾರಿಯ ಭಾಗ ಎಂದೇ ಚಿತ್ರರಂಗದವರು ಮಾತನಾಡಿಕೊಳ್ಳುತ್ತಿದ್ದಾರೆ.

ಕಮಲ ಹಾಸನ್ ಹಾಗೂ ಮಹೇಶ್ ಹೊಸದಾಗಿ ಪರಿಚಿತರಾದವರೇನೂ ಅಲ್ಲ. ಇಬ್ಬರೂ 'ವಿಶ್ವರೂಪಂ'ನಲ್ಲಿ ಒಟ್ಟಿಗೆ ಕೆಲಸ ಮಾಡಿದ್ದವರೇ. ಆ ಚಿತ್ರದ ಸಂಕಲನಕಾರನ ಹೊಣೆಯನ್ನು ಮಹೇಶ್ ನಿರ್ವಹಿಸಿದ್ದರು. ನಿರೀಕ್ಷಿತ ಮಟ್ಟದಲ್ಲಿ ಅದು ಹಿಟ್ ಆಗದೇ ಇದ್ದರೂ ಮಹೇಶ್ ಕೌಶಲವನ್ನು ಸಿನಿಮಾ ವಿದ್ಯಾರ್ಥಿಗಳು ಗುರುತಿಸಿದ್ದರು.

ಐ–ಫೋನ್ ಬಳಸಿ ಕೋವಿಡ್ ಸಂದರ್ಭದಲ್ಲಿ ಫಹಾದ್ ಫಾಸಿಲ್ ಫ್ಲ್ಯಾಟ್‌ನಲ್ಲಿಯೇ 'ಸೀ ಯೂ ಸೂನ್' ಸಿನಿಮಾ ನಿರ್ದೇಶಿಸಿ, ಅದನ್ನು ಓಟಿಟಿಯಲ್ಲಿ ತೆರೆಕಾಣಿಸಿದ್ದ ಮಹೇಶ್, ಹೊಸಕಾಲದ ಪಟ್ಟುಗಳನ್ನು ಬಲ್ಲ ನಿರ್ದೇಶಕ ಎಂದೂ ಗುರುತಾಗಿದ್ದಾರೆ.

ಕುಂಚಕೊ ಬೋಬನ್, ದಿವ್ಯ ಪ್ರಭಾ ಅಭಿನಯದ 'ಅರಿಯಿಪ್ಪು' ಎಂಬ ಮಲಯಾಳಂ ಚಿತ್ರವನ್ನು ಮಹೇಶ್ ನಿರ್ದೇಶಿಸಿದ್ದು, ಆಗಸ್ಟ್ ಮೊದಲ ವಾರ ಲೋಕಾರ್ನೊ ಚಿತ್ರೋತ್ಸವದಲ್ಲಿ ಅದರ ಪ್ರೀಮಿಯರ್ ಆಯಿತು. ಗೋಲ್ಡನ್ ಲಿಯೊಪಾರ್ಡ್ ಪ್ರಶಸ್ತಿಗೆ ಅದು ಪರಿಗಣಿತವಾಗಿದ್ದು, ಮಹೇಶ್ ಅವರ ಕಥನ ಕೌಶಲವನ್ನು ಅಲ್ಲಿದ್ದವರು ಕೊಂಡಾಡಿದರು. ಈ ಸಿನಿಮಾವನ್ನು ಬರೀ ಒಂದೂವರೆ ತಿಂಗಳಲ್ಲಿ ಮಹೇಶ್ ಪೂರೈಸಿದ್ದರೆನ್ನುವುದು ವಿಶೇಷ. ಮಾಧ್ಯಮದ ಮೇಲೆ ಅವರಿಗೆ ಇರುವ ಹಿಡಿತ, ಕೋವಿಡ್ ನಂತರದ ಕಾಲಘಟ್ಟದಲ್ಲಿ ಅವರು ಹೊಸೆಯುತ್ತಿರುವ ಕಥೆಗಳು ಹಾಗೂ ಕಮಲ ಹಾಸನ್ ತರಹದವರನ್ನೂ ಆಯಸ್ಕಾಂತದಂತೆ ಸೆಳೆಯುವ ಜಾಣ್ಮೆ ಇರುವ ಈ ನಿರ್ದೇಶಕನ ಮುಂದಿನ ದಿನಗಳು ಕುತೂಹಲ ಮೂಡಿಸಿವೆ.

ಕಮಲ ಹಾಸನ್ ಜತೆ ಕೆಲಸ ಮಾಡಲಿರುವ ಸಿನಿಮಾ ತಮಿಳಿನಲ್ಲಿ ಅವರ ಮೊದಲ ಸಿನಿಮಾ ಎನ್ನುವುದು ಇನ್ನೊಂದು ಮುಖ್ಯವಾದ ಸಂಗತಿ. ■

# ಅಕ್ಷಯ್‌ಗೆ ಹ್ಯಾಟ್ರಿಕ್ ಸೋಲು

'ಬಚ್ಚನ್ ಪಾಂಡೆ', 'ಸಾಮ್ರಾಟ್ ಪೃಥ್ವಿರಾಜ್', 'ರಕ್ಷಾಬಂಧನ್' ಈ ಮೂರೂ ಹಿಂದಿ ಸಿನಿಮಾಗಳು ಮಕಾಡೆಯಾಗುವ ಮೂಲಕ ಅಕ್ಷಯ್ ಕುಮಾರ್ ಸರ್ಕಾರದ ಪರವಾದ ವ್ಯಕ್ತಿತ್ವ ಕೂಡ ಮನರಂಜನಾ ಮಾಧ್ಯಮದಲ್ಲಿ ಗಿಟ್ಟುವುದಿಲ್ಲ ಎನ್ನುವುದನ್ನು ಸಾಬೀತುಪಡಿಸಿದೆ.

ದಕ್ಷಿಣದ 'ಜಿಗರ್‌ಥಂಡಾ' ಚಿತ್ರದ ರೀಮೇಕ್ 'ಬಚ್ಚನ್ ಪಂಡೆ'. ದಕ್ಷಿಣದಲ್ಲಿ ಆ ಕಥನ ಸದ್ದು ಮಾಡಿದ ಹಲವು ವರ್ಷಗಳ ನಂತರ ಹಿಂದಿಯಲ್ಲಿ ತೆರೆಕಂಡಿತು. ಅಕ್ಷಯ್ ಒರಟೊರಟಾಗಿ ಇದ್ದ ಆ ಚಿತ್ರವನ್ನು ಪ್ರೇಕ್ಷಕರು ಒಪ್ಪಿಕೊಳ್ಳಲಿಲ್ಲ. 'ಸಾಮ್ರಾಟ್ ಪೃಥ್ವಿರಾಜ್'ನಲ್ಲಿ ತೋರಿಸಿರುವ ಇತಿಹಾಸದ ಕುರಿತು ಕೆಲವು ತರಕಾರುಗಳನ್ನು ವ್ಯಕ್ತಪಡಿಸಿದರು. 'ಲಾಲ್ ಸಿಂಗ್ ಚಡ್ಡಾ' ಹಿಂದಿ ಸಿನಿಮಾ ಬಿಡುಗಡೆಯಾದ ಕಾಲಘಟ್ಟದಲ್ಲೇ ತೆರೆಕಂಡ 'ರಕ್ಷಾಬಂಧನ್' ಕೂಡ ಫ್ಲ್ಯಾಪ್ ಆಯಿತು. ಅದನ್ನೂ ಬಾಯ್ಕಾಟ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಕೆಲವು ಸಂದೇಶಗಳು ಹರಿದಾಡಿದ್ದವು. 'ರಕ್ಷಾಬಂಧನ್' 50 ಕೋಟಿ ರೂಪಾಯಿ ಕಲೆಕ್ಷನ್‌ನ ಗಡಿಯನ್ನೂ ದಾಟದೇ ಇರುವುದು ಹಿಂದಿ ಸಿನಿಮಾ ತಯಾರಕರಲ್ಲಿ ದೊಡ್ಡ ಪ್ರಶ್ನೆಯನ್ನು ಹುಟ್ಟುಹಾಕಿದೆ. ■

